ಓ.ಎಸ್.ನಂ.11/2021
ಡಿಡಬ್ಲೂ 3

**(ಇಂದು ದಿಃ 22.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)**

ಮುಂದುವರೆದ ಮುಖ್ಯ ವಿಚಾರಣೆ ಃ- ಶ್ರೀ ಎಸ್ ಕೆ ಬಿ ವಕೀಲರಿಂದ 8 ಮತ್ತು 9 ನೇ ಪ್ರತಿವಾದಿಗಳ ಪರ ಃ-

1. ನಾನು ಇಂದು ನ್ಯಾಯಾಲಯಕ್ಕೆ, ನಾನು ಇಂದು ನ್ಯಾಯಾಲಯಕ್ಕೆ ಎಲ್ ಎ ಸಿ ಅಪೀಲ್ ನಂಬರ್ 948/2017 ಮತ್ತು 950/2017 ನಲ್ಲಿನ ತೀರ್ಪು ಮತ್ತು ಡಿಕ್ರಿಯ ದೃಢೀಕೃತ ನಕಲುಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ-120 ಮತ್ತು 121 ಎಂದು ಗುರುತಿಸಲಾಯಿತು.
2. ಇ ಪಿ ನಂಬರ್ 53/2022 ರಲ್ಲಿನ ಅರ್ಜಿಯ ದೃಢೀಕೃತ ನಕಲು ಮತ್ತು ಆದೇಶದ ಹಾಳೆಗಳ ದೃಢೀಕೃತ ನಕಲುಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ-122 ಮತ್ತು 123 ಎಂದು ಗುರುತಿಸಲಾಯಿತು.
3. 4 ಛಾಯಾ ಚಿತ್ರಗಳು ಹಾಗೂ ಒಂದು ಸಿಡಿಯನ್ನು ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ-124 ರಿಂದ 128 ಎಂದು ಗುರುತಿಸಲಾಯಿತು.
   (ಈ ಸಮಯದಲ್ಲಿ ಮಾನ್ಯ ವಾದಿ ಪರ ವಕೀಲರು ಸದರಿ ಛಾಯಾ ಚಿತ್ರ ಹಾಗೂ ಸಿಡಿಗೆ ಸಂಬಂಧಿಸಿದಂತೆ ಕಲಂ 65(ಬಿ) ಭಾರತೀಯ ಸಾಕ್ಷ್ಯ ಅಧಿನಿಯಮದಡಿ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುವುದಿಲ್ಲ, ಆದ್ದರಿಂದ ನಿಶ್ಶಾನ್ಯವಾಗಿ ಗುರುತಿಸಲು ಬರುವುದಿಲ್ಲ ಎಂದು ಆಕ್ಷೇಪಣೆ ವ್ಯಕ್ತ ಪಡಿಸಿರುತ್ತಾರೆ. ಸದರಿ ಆಕ್ಷೇಪಣೆ ಹಾಗೂ ಸಾಕ್ಷ್ಯದ ಗುಣಗ್ರಹಣಕ್ಕೆ ಒಳಪಟ್ಟು ದಾಖಲೆಯನ್ನು ನಿಶ್ಶಾನ್ಯವಾಗಿ ಗುರುತಿಸಲು ಆದೇಶಿಸಲಾಯಿತು).
4. ಒಂದು ಬಿಲ್ಲನ್ನು ಹಾಜರು ಪಡಿಸಿದ್ದು ಅದನ್ನು ನಿಡಿ-129 ಎಂದು ಗುರುತಿಸಲಾಯಿತು.
5. ದಿಃ 22.04.2002 ರ ಮೂಲ ನೊಂದಾಯಿತ ಕ್ರಯ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಡಿ-130 ಎಂದು ಗುರುತಿಸಲಾಯಿತು.
   (ಈ ಸಮಯದಲ್ಲಿ ಮಾನ್ಯ ಪ್ರತಿವಾದಿ ಪರ ವಕೀಲರು ಮುಂದಿನ ಮುಖ್ಯ ವಿಚಾರಣೆಗಾಗಿ ಸಮಯಾವಕಾಶವನ್ನು ಕೋರಿದ್ದು, ಆಲಿಸಿ ನೀಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಪ್ರಭಾರ ಹಿರಿಯ ಸಿವಿಲ್ ನ್ಯಾಯಾಧೀಶರು,
ಆಳಂದ.